# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಯು.ಹನುಮಂತಪ್ಪ ಮತ್ತು ಶ್ರೀ ರುದ್ರಪ್ಪ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಶ್ರೀ ಕೆ.ಎಸ್ ಬಸವರಾಜ್, ಹಿಂದಿನ ಕಾರ್ಯದರ್ಶಿ, ವಿಠಲಾಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರ ವಿರುದ್ಧ ಲೋಕಾಯುಕ್ತ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 88 ಇಎನ್‌ಕ್ಯೂ 15, ದಿನಾಂಕ: 05.10.2015 ಮತ್ತು ಅಪಜೀ 122 ಅಇವಿ 2015, ದಿನಾಂಕ: 06.11.2015.
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಉಪಲೋಕ್-2/ಡಿಇ/537/2015/ಎಆರ್‌ಇ-10, ದಿನಾಂಕ: 05.01.2018.
3) ಸರ್ಕಾರದ ಸಮಸಂಖ್ಯೆಯ ಎರಡನೇ ಕಾರಣ ಕೇಳಿ ನೋಟೀಸ್, ದಿನಾಂಕ 26.02.2018.
4) ಶ್ರೀ ಯು.ಹನುಮಂತಪ್ಪ ಮತ್ತು ಶ್ರೀ ರುದ್ರಪ್ಪ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಶ್ರೀ ಕೆ.ಎಸ್ ಬಸವರಾಜ್, ಹಿಂದಿನ ಕಾರ್ಯದರ್ಶಿ, ವಿಠಲಾಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಲಿಖಿತ ಹೇಳಿಕೆ.

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, ಸಂಡೂರು ತಾಲ್ಲೂಕು ವಿಠಲಾಪುರ ಗ್ರಾಮ ಪಂಚಾಯತ್‌ನ ತುಮಟಿ ಗ್ರಾಮದಲ್ಲಿ ಸ್ವಚ್ಛ ಗ್ರಾಮ ಯೋಜನೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳಡಿ ಸಿ.ಸಿ ರಸ್ತೆ, ಚರಂಡಿ ಕಾಮಗಾರಿ, ಶಾಲಾ ಕಾಂಪೌಂಡ್ ಕಾಮಗಾರಿ ಮತ್ತು ಶಾಲಾ ಆವರಣದಲ್ಲಿ ಸಸಿ ನೆಡುವ ಕಾಮಗಾರಿಗಳಲ್ಲಿ ವಿವಿಧ ರೀತಿಯ ಕರ್ತವ್ಯ ಲೋಪ, ಹಣ ದುರುಪಯೋಗವಾಗಿರುವುದು, ರಸ್ತೆಗಳನ್ನು ಅನುಮೋದಿತ ಸ್ಥಳಗಳಲ್ಲಿ ನಿರ್ಮಾಣ ಮಾಡದೇ ಸ್ಥಳ ಬದಲಾವಣೆ ಮಾಡಿರುವುದು ಇದಕ್ಕೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ಇರುವುದು, ಕೆಲವೊಂದು ಕಾಮಗಾರಿಗಳಲ್ಲಿ ಹೆಚ್ಚುವರಿ ಅಳತೆ ದಾಖಲಿಸಿರುವುದು, ಕಾಮಗಾರಿ ನಿರ್ವಹಿಸದೇ ಕಾಮಗಾರಿ ನಿರ್ವಹಿಸಲಾಗಿದೆ ಎಂದು ಅಳತೆ ಪುಸ್ತಕದಲ್ಲಿ ದಾಖಲಿಸಿ, ಹಣ ಪಾವತಿಸಿರುವ ಆರೋಪಗಳ ಮೇಲೆ 1) ಶ್ರೀ ಯು.ಹನುಮಂತಪ್ಪ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ವಿಠಲಾಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು 2) ಶ್ರೀ ಕೆ.ಆರ್ ವೆಂಕಟೇಶ್ವರ, ಹಿಂದಿನ ಸಹಾಯಕ ಇಂಜಿನಿಯರ್, ತಾಲ್ಲೂಕ್ ಪಂಚಾಯತ್, ಸಂಡೂರು 3) ಶ್ರೀ ಕೆ.ಎಸ್ ಬಸವರಾಜ್, ಹಿಂದಿನ ಕಾರ್ಯದರ್ಶಿ, ವಿಠಲಾಪುರ ಗ್ರಾಮ ಪಂಚಾಯತ್ 4) ಶ್ರೀ ರುದ್ರಪ್ಪ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವಿಠಲಾಪುರ ಗ್ರಾಮ ಪಂಚಾಯಿತಿ 5) ಶ್ರೀ ಬಸವನಗೌಡ, ಹಿಂದಿನ ಸಹಾಯಕ ಇಂಜಿನಿಯರ್, ತಾಲ್ಲೂಕು ಪಂಚಾಯತ್, ಸಂಡೂರು 6) ಶ್ರೀ ಎಸ್ ಸಣ್ಣ ಸಮ್ಯುನಾಯಕ್, ವನಪಾಲಕರು, ಸಾಮಾಜಿಕ ಅರಣ್ಯ ವಲಯ, ಸಂಡೂರು ತಾಲ್ಲೂಕು ರವರ ವಿರುದ್ಧ ಇಲಾಖೆ ವಿಚಾರಣೆ ಕೈಗೊಳ್ಳಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿ ಆದೇಶಿಸಲಾಗಿತ್ತು.

ಮೇಲೆ ಓದಲಾದ (2) ರಲ್ಲಿ, ತನಿಖಾಧಿಕಾರಿಗಳಾದ ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ಇವರು ಪ್ರಕರಣದ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ ಮಾನ್ಯ ಉಪಲೋಕಾಯುಕ್ತರು ದಿನಾಂಕ: 29.12.2017 ರ ವರದಿಯಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ರನ್ವಯ ಶ್ರೀ ಯು.ಹನುಮಂತಪ್ಪ ಮತ್ತು ಶ್ರೀ ರುದ್ರಪ್ಪ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಶ್ರೀ ಕೆ.ಎಸ್ ಬಸವರಾಜ್, ಹಿಂದಿನ ಕಾರ್ಯದರ್ಶಿ, ವಿಠಲಾಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ರವರಿಗೆ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಐದು ವರ್ಷಗಳ ಅವಧಿಗೆ ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ದಂಡನೆ ವಿಧಿಸಲು ಹಾಗೂ ಸದರಿಯವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ವಸೂಲಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ (3) ರಲ್ಲಿ ಪ್ರಕರಣದ ಸಂಬಂಧ ಮಾನ್ಯ ಉಪಲೋಕಾಯುಕ್ತರು ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಸದರಿ ನೌಕರರಿಗೆ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಲಾಗಿತ್ತು.

ಮೇಲೆ ಓದಲಾದ (4) ರಲ್ಲಿ ಆರೋಪಿತ ನೌಕರರು ಎರಡನೇ ಕಾರಣ ಕೇಳುವ ನೋಟೀಸಿಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

**1) ಶ್ರೀ ಯು.ಹನುಮಂತಪ್ಪ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ವಿಠಲಾಪುರ ಗ್ರಾಮ ಪಂಚಾಯತಿ**

- ತುಮಟಿ ಗ್ರಾಮದ ಸ್ವಚ್ಛ ಗ್ರಾಮದ ಯೋಜನೆ ಸಿ.ಸಿ ರಸ್ತೆ ಪೈಕಿ ರುದ್ರಪ್ಪ ರವರ ಮನೆಯಿಂದ ಖಾಸಿಂ ರವರ ಮನೆವರೆಗೆ ರಸ್ತೆ ಮತ್ತು ಹೊಸಳ್ಳಿ ಅಂಜಿನಪ್ಪ ಇವರ ಮನೆಯಿಂದ ಬಾಲಪ್ಪ ಮನೆವರೆಗೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ ಹರಿಜನ ಅಪ್ಪಯ್ಯ ರವರ ಮನೆಯಿಂದ ನಾಗಪ್ಪ ಬಗಾಡೆ ರವರ ಮನೆಯವರೆಗಿನ

ಕಾಮಗಾರಿಗಳನ್ನು ಸಾರ್ವಜನಿಕರ ಮನವಿ ಮೇರೆಗೆ ದಿ:12.07.2010 ಮತ್ತು 16.03.2012ರಂದು ನಡೆದ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದು ನಂತರ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು ನಿಯಮಾನುಸಾರ ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ.

- ತುಮಟಿ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಚರಂಡಿ ಕಾಮಗಾರಿಯ ಅಳತೆಯ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ ಸದರಿ ಕಾಮಗಾರಿ ಪೂರ್ಣಗೊಂಡ ಮೇಲೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಪರಿಶೀಲಿಸಿ ಅಳತೆ ಪುಸ್ತಕದಲ್ಲಿ ಚೆಕ್ ಮೆಷರ್‌ಮೆಂಟ್ ದಾಖಲಿಸಿ ಸಹಿ ಮಾಡಿರುವುದು ನಿಜವಿರುತ್ತದೆ. 2011-12ನೇ ಸಾಲಿನ ಸೆಪ್ಟೆಂಬರ್ ತಿಂಗಳಿನಲ್ಲಿ ಭಾರಿ ಭಾರದ ಕಬ್ಬಿಣದ ಅದಿರು ಸಾಗಾಣೆ ಲಾರಿಗಳ ತೀವ್ರ ಸಂಚಾರದ ನಿಮಿತ್ತ ತಿರುವು ರಸ್ತೆಯಲ್ಲಿ ನಿರ್ಮಿಸಿದ ಚರಂಡಿ ಕಟ್ಟಡವು ಭಾಗಶಃ ನೆಲಸಮಗೊಂಡಿರುತ್ತದೆ. ಇದಕ್ಕೆ ಪೂರಕವಾಗಿ ತುಮಟಿ ಗ್ರಾಮಸ್ಥರ ಹೇಳಿಕೆಯನ್ನು ಲೋಕಾಯುಕ್ತಕ್ಕೆ ಸಲ್ಲಿಸಿದ್ದರೂ ಸಹ ಪರಿಗಣಿಸಿರುವುದಿಲ್ಲ.
- 2010-11ನೇ ಸಾಲಿನ ಉದ್ಯೋಗ ಖಾತ್ರಿ ಯೋಜನೆಯಡಿ ತುಮಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಸಸಿ ನೆಡುವ ಕಾಮಗಾರಿಯನ್ನು ಸಾಮಾಜಿಕ ವಲಯ ಅರಣ್ಯ ಇಲಾಖಾ ವತಿಯಿಂದ 2010-11ನೇ ಸಾಲಿನಲ್ಲಿ ಅಂದಾಜು ಮೊತ್ತ 1.00 ಲಕ್ಷ ರೂಗಳ ಕಾಮಗಾರಿಯಲ್ಲಿ 200 ಸಸಿಗಳನ್ನು ಮಾತ್ರ ನೆಟ್ಟು ಅಕ್ಟೋಬರ್ ತಿಂಗಳಿನಲ್ಲಿ ಪೂರ್ಣಗೊಳಿಸಲಾಗಿತ್ತು. ಕಾಮಗಾರಿ ಪೂರ್ಣಗೊಂಡ ಪರಿಮಾಣಕ್ಕೆ ತಕ್ಕಂತೆ 31,511 ರೂ ಗಳನ್ನು ಮಾತ್ರ ವೆಚ್ಚ ಮಾಡಲಾಗಿದೆ. ಕಾಮಗಾರಿ ಪೂರ್ಣಗೊಳಿಸಿರುವ ಬಗ್ಗೆ ಶಾಲಾ ಮುಖ್ಯೋಪಾಧ್ಯಾಯರ ದೃಢೀಕರಣ ಪತ್ರ ಮತ್ತು ಛಾಯಾ ಚಿತ್ರ ಸಲ್ಲಿಸಿದ್ದರೂ ಮಾನ್ಯ ಲೋಕಾಯುಕ್ತರು ಪರಿಗಣಿಸಿರುವುದಿಲ್ಲ. ಕಾಮಗಾರಿಯಲ್ಲಿ ಯಾವುದೇ ತರಹದ ವ್ಯತ್ಯಾಸ ಬಾರದ ಹಾಗೆ ನಿರ್ವಹಿಸಲಾಗಿರುತ್ತದೆ. ಕಾಮಗಾರಿಯು ಪೂರ್ಣಗೊಂಡ ನಂತರ ಬೇಸಿಗೆ ಅವಧಿಯಲ್ಲಿ ಗ್ರಾಮದಲ್ಲಿ ಕುಡಿಯುವ ನೀರಿನ ತೀವ್ರ ಅಭಾವ ತಲೆದೋರಿದ್ದರಿಂದ ಸಸಿಗಳನ್ನು ಸಂರಕ್ಷಿಸಲು ಸಾಧ್ಯವಾಗಿಲ್ಲದ್ದರಿಂದ ಭಾಗಶಃ ಹಾಳಾಗಿರುತ್ತವೆ.
- ಕೆ.ಸಿ.ಎಸ್.ಆರ್ (ಸಿ.ಸಿ.ಎ) 1957 ನಿಯಮ 8(3) ರಂತೆ ದಂಡ ವಿಧಿಸುವ ಬಗ್ಗೆ ಶಿಫಾರಸ್ಸು ಮಾಡುವುದು ನಿಯಮಬಾಹಿರ, ನಿವೃತ್ತಿ ವೇತನದಲ್ಲಿ ಕಡಿತಗೊಳಿಸಲು ಉಪಲೋಕಾಯುಕ್ತರಿಗೆ ಅಧಿಕಾರವಿಲ್ಲದಿದ್ದರೂ ದಂಡಕ್ಕೆ ಶಿಫಾರಸ್ಸು ಮಾಡಿರುವ ಕ್ರಮ ನ್ಯಾಯಬದ್ಧವಾಗಿರುವುದಿಲ್ಲವೆಂಬುದು ನ್ಯಾಯಾಲಯಗಳ ಆದೇಶಗಳಲ್ಲಿ ದೃಢಪಟ್ಟಿರುತ್ತದೆ. 2016 ರ ಬೆಂಗಳೂರು ಉಚ್ಚ ನ್ಯಾಯಾಲಯವು ಶ್ರೀ ಕೃಷ್ಣಮೂರ್ತಿ ಇಂಜಿನಿಯರ್ ರವರ ರಿಟ್ ಅರ್ಜಿಯಲ್ಲಿ ಉಪಲೋಕಾಯುಕ್ತರು ದಂಡ ವಿಧಿಸುವ ಬಗ್ಗೆ ಶಿಫಾರಸ್ಸನ್ನು ಶಿಸ್ತು ಪ್ರಾಧಿಕಾರವು ಪರಿಶೀಲಿಸಿ ತಮ್ಮ ವಿವೇಚನೆಯಂತೆ ಬದಲಾಯಿಸುವ/ಮಾರ್ಪಾಡು ಮಾಡುವ/ಕೈಬಿಡುವ ಅಧಿಕಾರವಿರುತ್ತದೆ. ಆದ್ದರಿಂದ ಮಾನ್ಯ ಉಪಲೋಕಾಯುಕ್ತರು ನೀಡಿರುವ ಶಿಫಾರಸ್ಸುಗಳನ್ನು ತಿರಸ್ಕರಿಸಿ, ನ್ಯಾಯ ಒದಗಿಸಲು ಹಾಗೂ ಪ್ರಕರಣ ವಿಲೇಗೊಳಿಸಲಿಕ್ಕೆ ವಿನಂತಿಸಿರುತ್ತಾರೆ.

2) <u>ಶ್ರೀ ರುದ್ರಪ್ಪ, ಹಿಂದಿನ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ವಿಠಲಾಪುರ ಗ್ರಾಮ ಪಂಚಾಯತಿ</u>

- 2008-09ನೇ ಸಾಲಿನ ನರೇಗಾ ಯೋಜನೆಯಡಿಯಲ್ಲಿ ತುಮಟಿ ಗ್ರಾಮದಲ್ಲಿ ದನಕರುಗಳ ಓಡಾಡುವ ರಸ್ತೆ ರೂ 53,000 ಗಳ ವೆಚ್ಚದ ದುರಸ್ತಿ ಮಾಡಿಸಿರುವುದು ನಿಜವಿರುತ್ತದೆ. ಇದು ಮಣ್ಣಿನಿಂದ ಕೂಡಿರುತ್ತದೆ ಎಂದು ತನಿಖಾ ವರದಿಯಲ್ಲಿ ಸೂಚಿಸಿರುತ್ತಾರೆ. ಸದರಿ ಕಾಮಗಾರಿಯ ಅಳತೆ ಪುಸ್ತಕದ ಸಂಖ್ಯೆ:22404 ಪುಟ 58 ರಿಂದ 60 ರವರೆಗೆ ದಾಖಲೆಯಾಗಿರುವುದು ಕಾಮಗಾರಿ ನಿರ್ವಹಿಸಿರುವ ಬಗ್ಗೆ ದೂರುದಾರರಿಗೆ ಕಾಮಗಾರಿಯ ಪ್ರಗತಿಯಲ್ಲಿರುವ ಛಾಯಾ ಚಿತ್ರವನ್ನು ಒದಗಿಸಿರುತ್ತಾರೆ ಮತ್ತು ಸ್ಥಳೀಯರನ್ನು ವಿಚಾರಿಸಿದಾಗ ಕಾಮಗಾರಿ ನಿರ್ವಹಿಸಲಾಗಿದೆ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ. ನಮ್ಮ ಮೇಲೆ ಯಾವುದೇ ಹಣ ದುರುಪಯೋಗವಿರುವುದಿಲ್ಲ.
- ಕೆ.ಸಿ.ಎಸ್.ಆರ್ (ಸಿ.ಸಿ.ಎ) 1957 ನಿಯಮ 8(3) ರಂತೆ ದಂಡ ವಿಧಿಸುವ ಬಗ್ಗೆ ಶಿಫಾರಸ್ಸು ಮಾಡುವುದು ನಿಯಮಬಾಹಿರ, ನಿವೃತ್ತಿ ವೇತನದಲ್ಲಿ ಕಡಿತಗೊಳಿಸಲು ಉಪಲೋಕಾಯುಕ್ತರಿಗೆ ಅಧಿಕಾರವಿಲ್ಲದಿದ್ದರೂ ದಂಡಕ್ಕೆ ಶಿಫಾರಸ್ಸು ಮಾಡಿರುವ ಕ್ರಮ ನ್ಯಾಯಬದ್ಧವಾಗಿರುವುದಿಲ್ಲವೆಂಬುದು ನ್ಯಾಯಾಲಯಗಳ ಆದೇಶಗಳಲ್ಲಿ ದೃಢಪಟ್ಟಿರುತ್ತದೆ. 2016 ರ ಬೆಂಗಳೂರು ಉಚ್ಚನ್ಯಾಯಾಲಯವುಶ್ರೀ ಕೃಷ್ಣಮೂರ್ತಿ ಇಂಜಿನಿಯರ್ ರವರ ರಿಟ್ ಅರ್ಜಿಯಲ್ಲಿ ಉಪಲೋಕಾಯುಕ್ತರು ದಂಡ ವಿಧಿಸುವ ಬಗ್ಗೆ ಶಿಫಾರಸ್ಸನ್ನು ಶಿಸ್ತು ಪ್ರಾಧಿಕಾರವು ಪರಿಶೀಲಿಸಿ ತಮ್ಮ ವಿವೇಚನೆಯಂತೆ ಬದಲಾಯಿಸುವ/ಮಾರ್ಪಾಡು ಮಾಡುವ/ಕೈಬಿಡುವ ಅಧಿಕಾರವಿರುತ್ತದೆ. ಆದ್ದರಿಂದ ಮಾನ್ಯ ಉಪಲೋಕಾಯುಕ್ತರು ನೀಡಿರುವ ಶಿಫಾರಸ್ಸುಗಳನ್ನು ತಿರಸ್ಕರಿಸಿ, ನ್ಯಾಯ ಒದಗಿಸಲು ಹಾಗೂ ಪ್ರಕರಣ ವಿಲೇಗೊಳಿಸಲಿಕ್ಕೆ ವಿನಂತಿಸಿರುತ್ತಾರೆ.

.....3

3) <u>ಶ್ರೀ ಕೆ.ಎಸ್ ಬಸವರಾಜ್, ಹಿಂದಿನ ಕಾರ್ಯದರ್ಶಿ, ವಿಠಲಾಪುರ ಗ್ರಾಮ ಪಂಚಾಯತಿ</u>

- 2008-09ನೇ ಸಾಲಿನ ಗ್ರಾಮ ಸ್ವರಾಜ್ ಯೋಜನೆಯಡಿ ಸಿಸಿ ರಸ್ತೆ ಕಾಮಗಾರಿಯು ಟೆಂಡರ್ ಕಾಮಗಾರಿಯಾಗಿರುತ್ತದೆ. 2008-09ನೇ ಸಾಲಿನಲ್ಲಿ ಸುರಿದ ಭಾರಿ ಮಳೆಯಿಂದ ಕಾಮಗಾರಿ ಸ್ವಲ್ಪ ಮಟ್ಟಿಗೆ ಹಾಳಾಗಿದ್ದು ಕಂಡುಬಂದಿರುತ್ತದೆ. ಸದರಿ ಕಾಮಗಾರಿಯನ್ನು ನಿರ್ವಹಿಸಿದ ಗುತ್ತಿಗೆದಾರರಿಗೆ ನೋಟೀಸ್ ನೀಡಿ ಅವರ ಭದ್ರತಾ ಠೇವಣಿ ಮೊತ್ತದಲ್ಲಿ ಕಾಮಗಾರಿಯ ಹಾಳಾದ ಭಾಗವನ್ನು ಸರಿಪಡಿಸಲಾಗಿರುತ್ತದೆ. ಲೋಕಾಯುಕ್ತರು ಆರೋಪ ಮಾಡಿದಂತೆ ಸ್ವಚ್ಛ ಗ್ರಾಮ ಯೋಜನೆಯಡಿ ಯಾವುದೇ ವೆಚ್ಚ ಭರಿಸಿರುವುದಿಲ್ಲ.
- ಕೆ.ಸಿ.ಎಸ್.ಆರ್ (ಸಿ.ಸಿ.ಎ) 1957 ನಿಯಮ 8(3) ರಂತೆ ದಂಡ ವಿಧಿಸುವ ಬಗ್ಗೆ ಶಿಫಾರಸ್ಸು ಮಾಡುವುದು ನಿಯಮಬಾಹಿರ, ನಿವೃತ್ತಿ ವೇತನದಲ್ಲಿ ಕಡಿತಗೊಳಿಸಲು ಉಪಲೋಕಾಯುಕ್ತರಿಗೆ ಅಧಿಕಾರವಿಲ್ಲದಿದ್ದರೂ ದಂಡಕ್ಕೆ ಶಿಫಾರಸ್ಸು ಮಾಡಿರುವ ಕ್ರಮ ನ್ಯಾಯಬದ್ಧವಾಗಿರುವುದಿಲ್ಲವೆಂಬುದು ನ್ಯಾಯಾಲಯಗಳ ಆದೇಶಗಳಲ್ಲಿ ದೃಢಪಟ್ಟಿರುತ್ತದೆ. 2016 ರ ಬೆಂಗಳೂರು ಉಚ್ಚನ್ಯಾಯಾಲಯವು ಶ್ರೀ ಕೃಷ್ಣಮೂರ್ತಿ ಇಂಜಿನಿಯರ್ ರವರ ರಿಟ್ ಅರ್ಜಿಯಲ್ಲಿ ಉಪಲೋಕಾಯುಕ್ತರು ದಂಡ ವಿಧಿಸುವ ಬಗ್ಗೆ ಶಿಫಾರಸ್ಸನ್ನು ಶಿಸ್ತು ಪ್ರಾಧಿಕಾರವು ಪರಿಶೀಲಿಸಿ ತಮ್ಮ ವಿವೇಚನೆಯಂತೆ ಬದಲಾಯಿಸುವ/ಮಾರ್ಪಾಡು ಮಾಡುವ/ಕೈಬಿಡುವ ಅಧಿಕಾರವಿರುತ್ತದೆ. ಆದ್ದರಿಂದ ಮಾನ್ಯ ಉಪಲೋಕಾಯುಕ್ತರು ನೀಡಿರುವ ಶಿಫಾರಸ್ಸುಗಳನ್ನು ತಿರಸ್ಕರಿಸಿ, ನ್ಯಾಯ ಒದಗಿಸಲು ಹಾಗೂ ಪ್ರಕರಣ ವಿಲೇಗೊಳಿಸಲಿಕ್ಕೆ ವಿನಂತಿಸಿರುತ್ತಾರೆ.

ಸದರಿ ಪ್ರಕರಣದ ಕುರಿತು ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ ರವರು ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಆಪಾದಿತ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಸದರಿ ವಿಚಾರಣಾ ವರದಿಯ ಪ್ರಮುಖ ಅಂಶಗಳನ್ನು ಈ ಕೆಳಕಂಡಂತೆ ಪುನರುಚ್ಛರಿಸಿದೆ:-

"66. The oral and documentary evidence on record clearly reveals that: -

(i) The DGOs-1 and 2 have diverted the C.C road works from residence of Rudrappa to Khasim's house and Hosalli Anjinappa's house to Balappa's residence and also the drainage work from Harijana Appaiah's residence to Nagappa Bagade's house, without getting approval of same from the Executive Officer, Taluk Panchayath Sandur in respect of the works taken up under Swacha Gram Yojana for the year 2009-10.

(ii) The DGOs-4 and 5 have not taken the photographs showing the progress of works in respect of the construction of compound of Government School, the road work and also the planting of samplings at the premises of Government School.

(iii) The DGOs-1 and 2 have shown more measurements than the work executed and thereby have paid Rs.46,752/- in excess and caused loss to Government.

(iv) The road work taken up under Grama Swaraj Yojana for the year 2008-09 in Tumati Village for Rs.2.80 lakhs, has been damaged within 2 years of execution and hence an amount of Rs. 68,774/- spent by the DGOs-3 and 5 for the said work is the loss caused to the Government.

(v) The work of planting saplings in Govt. Higher Primary School under Employment Guarantee Scheme for the year 2010-11 in Tumati Village, seems to have not been executed during spot inspection and the Head Master of the school has also not certified the said work and hence an amount of Rs.31,511/- shown to have been spent, has been misappropriated by the DGOs-1 and 6.

(vi) Therby amount of loss caused to the Govt. by DGO-1 U Hanumanthappa, is Rs.31,339/-, DGO-2 Sri K.R Venkateshwara, is Rs.15,584/-, DGO-3 Sri.K.S Basavaraj, Secretary is Rs 22,925-00, DGO-5 Sri Basavana Gowda, Asst.Engineer (Retired) is Rs.22,924/- and DGO-6 Sri S.Sanna Samyanayak is Rs.15,756/-.

.....4

Thereby the DGOs, being the Government/Public Servants have failed to maintain absolute integrity besides devotion to duty and acted in a manner unbecoming of the Government servants. Hence, I proceed to answer Point No.1 in the Affirmative."

ಸರ್ಕಾರವು ಪರಿಶೀಲಿಸಿ, ಈ ಹಿನ್ನೆಲೆಯಲ್ಲಿ, ಆಪಾದಿತರು ಎರಡನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ. ಆದುದರಿಂದ, ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ, ಶ್ರೀ ಯು.ಹನುಮಂತಪ್ಪ ಮತ್ತು ಶ್ರೀ ರುದ್ರಪ್ಪ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಶ್ರೀ ಕೆ.ಎಸ್ ಬಸವರಾಜ್, ಹಿಂದಿನ ಕಾರ್ಯದರ್ಶಿ, ವಿಠಲಾಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಐದು ವರ್ಷಗಳ ಅವಧಿಗೆ ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಮತ್ತು ಸದರಿಯವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ವಸೂಲಿ ಮಾಡಲು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 52 ಗ್ರಾಪಂಕಾ 2018, ಬೆಂಗಳೂರು, ದಿನಾಂಕ: 12.10.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1)(i) ರಿಂದ (iii) ನೇ ನಿಬಂಧನೆಗಳನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರ ವರದಿಯಲ್ಲಿನ ಶಿಫಾರಸ್ಸಿನನ್ವಯ, ಶ್ರೀ ಯು.ಹನುಮಂತಪ್ಪ ಮತ್ತು ಶ್ರೀ ರುದ್ರಪ್ಪ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಶ್ರೀ ಕೆ.ಎಸ್ ಬಸವರಾಜ್, ಹಿಂದಿನ ಕಾರ್ಯದರ್ಶಿ, ವಿಠಲಾಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 8(iii) ಅಡಿಯಲ್ಲಿ ನಿರ್ದಿಷ್ಟಪಡಿಸಿದಂತೆ ಮೂರು ವಾರ್ಷಿಕ ವೇತನ ಬಡ್ತಿಗಳನ್ನು ಐದು ವರ್ಷಗಳ ಅವಧಿಗೆ ಸಂಚಿತ ಪರಿಣಾಮ ಸಹಿತವಾಗಿ ತಡೆಹಿಡಿಯುವ (Withholding of three annual increments for a period of five years with cumulative effect) ದಂಡನೆಯನ್ನು ವಿಧಿಸಲು ಮತ್ತು ಸದರಿಯವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟವನ್ನು ವಸೂಲಿ ಮಾಡಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

12/x/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು, ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬಳ್ಳಾರಿ ಜಿಲ್ಲಾ ಪಂಚಾಯತಿ, ಬಳ್ಳಾರಿ.
7) ಕಾರ್ಯನಿರ್ವಾಹಕ ಅಧಿಕಾರಿ, ಸಂಡೂರು ತಾಲ್ಲೂಕು ಪಂಚಾಯತಿ, ಸಂಡೂರು, ಬಳ್ಳಾರಿ ಜಿಲ್ಲೆ. (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
8) ಶ್ರೀ ಯು.ಹನುಮಂತಪ್ಪ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವಿಠಲಾಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ.
9) ಶ್ರೀ ರುದ್ರಪ್ಪ, ಹಿಂದಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ವಿಠಲಾಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ.

10) ಶ್ರೀ ಕೆ.ಎಸ್ ಬಸವರಾಜ್, ಹಿಂದಿನ ಕಾರ್ಯದರ್ಶಿ, ವಿಠಲಾಪುರ ಗ್ರಾಮ ಪಂಚಾಯಿತಿ, ಸಂಡೂರು ತಾಲ್ಲೂಕು, ಬಳ್ಳಾರಿ ಜಿಲ್ಲೆ.

11) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.

12) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.